(ಅ) ಸದರಿ ದೇವಾಲಯದಲ್ಲಿ ಭಕ್ತಾದಿಗಳಿಗೆ ಕುಡಿಯುವ ನೀರು, ಶೌಚಾಲಯ ಹಾಗೂ ವಸತಿ ಸೌಲಭ್ಯ ಕಲ್ಪಿಸಲಾಗಿದೆ.

(ಇ) ಈ ಕುರಿತಂತೆ ಮಹಾನಕ್ಷೆ ತಯರಿಸುವ ವಿಷಯವನ್ನು ಪರಿಸೀಲಿಸಲಾಗುತ್ತಿದೆ.

(ಈ) ಅಂತಹ ಮಹಾನಕ್ಷೆ ಅನುಮೋದನೆಯಾದ ನಂತರ, ಸಂಬಂಧಪಟ್ಟ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ದೇವಾಲಯದ ನಿಧಿ ಹಾಗು ಅನುದಾನದ ಲಭ್ಯತೆ ಆಧರಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ದೇವಸ್ಥಾನ ಅಭಿವೃದ್ಧಿ ಪಡಿಸುವುದು

289 (718) **ಶ್ರೀ ಬಿ. ಕೆ. ಸಂಗಮೇಶ್ವರ:**– ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಮತ್ತು ಜಲಸಾರಿಗೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಭದ್ರಾವತಿ ತಾಲ್ಲೂಕಿನ ಹಳೇನಗರದಲ್ಲಿರುವ ಪುರಾಣ ಪ್ರಸಿದ್ಧ ಹಾಗೂ ಪ್ರಾಚೀನ ದೇವಸ್ಥಾನಗಳಾದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ಹಾಗೂ ಹೊನ್ನೇಗುಡ್ಡ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಎರಡೂ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವಾಗ ಅಭಿವೃದ್ಧಿಪಡಿಲಾಗುವುದು?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮಾನ್ಯ ಮುಜರಾಯಿ ಹಾಗೂ ಬಂದರು, ಒಳನಾಡು ಜಲಸಾರಿಗೆ ಸಚಿವರು):–

(ಅ) ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಇರುತ್ತದೆ. ಆದರೆ ಹೊನ್ನೇಗುಡ್ಡ ದೇವಾಲಯದ ಅಭಿವೃದ್ಧಿಪಡಿಸುವ ಪ್ರಸ್ತಾವನೆ ಇರುವುದಿಲ್ಲ.

(ಆ) ಭದ್ರಾವತಿ ತಾಲ್ಲೂಕು ಹಳೇನಗರದಲ್ಲಿನ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯವನ್ನು ಶ್ರೀಮತಿ ಸತ್ಯಮ್ಮ ಮತ್ತು ಶ್ರೀಕೃಷ್ಣ ದೀಕ್ಷಿತ್ ಚಾರಿಟೇಬಲ್ ಟ್ರಸ್ಟಿ ಇವರು ಜೀರ್ಣೋದ್ಧಾರಗೊಳಿಸಲು ಮುಂದೆ ಬಂದಿದ್ದು, ರಾಜ್ಯ ಪ್ರಾಚ್ಯವಸ್ತು ಇಲಾಖೆ ಅನುಮತಿ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.